ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

ಸಂಪುಟ ೧ ಸಂಚಿಕೆ ೪೬ ಭಾನುವಾರ ೧೭–೭–೧೯೮೩ ಕೊಪ್ಪ ಬೆಲೆ ೪೦ ಪೈಸೆ

"ರೈತರ ಮೇಲಿನ ದಬ್ಬಾಳಿಕೆ ತಡೆಯಲು ರೈತ ಸಂಘ ಸಜ್ಜು"

ತೀರ್ಥಹಳ್ಳಿ: ರೈತರ ಬಗ್ಗೆ ಸರ್ಕಾರದ ಮತ್ತು ಅವೈಜ್ಞಾನಿಕ ನೀತಿಗಳಿಂದಾಗಿ ರೈತರನ್ನು ಸಾಲದ ದವಡೆಗೆ ಸಿಕ್ಕಿಸಿರುವ ಸರ್ಕಾರ ಈಗ ರೈತರ ಜಪ್ತಿಗೆ ಬರುವ ಹೇಳಿಕೆ ಕೊಡುತ್ತಿದ್ದು ಈ ದಬ್ಬಾಳಿಕೆಯನ್ನು ತಡೆಯಲು ತೀರ್ಥಹಳ್ಳಿ ತಾ|| ರೈತ ಸಂಘ ಪೂರ್ಣ ಸಜ್ಜಾಗಿದೆಯೆಂದು ತಾ|| ರೈತ ಸಂಘದ ಅಧ್ಯಕ್ಷ ಕಡಿದಾಳು ಶಾಮಣ್ಣ ತಿಳಿಸಿದ್ದಾರೆ.

"ಜನತಾ ಪಕ್ಷ ಚುನಾವಣೆಗೆ ಮೊದಲು ಆಶ್ವಾಸನೆ ಕೊಟ್ಟಂತೆ, ಹಾಗೂ ಸರ್ಕಾರ ರಚನೆಯಾದ ನಂತರದ ಪ್ರಥಮ ಮಾತುಕತೆಯಲ್ಲಿ ಮುಖ್ಯ ಮಂತ್ರಿಗಳು ಕರ್ನಾಟಕ ರಾಜ್ಯ ರೈತ ಸಂಘಕ್ಕೆ ಕೊಟ್ಟ ಸ್ಪಷ್ಟ ಭರವಸೆಯಂತೆ, ರೈತ ವಿರೋಧಿ ಜಪ್ತಿಯಿಂದ ಹಿಂದಿನ ಸರ್ಕಾರ ತೆಗೆದುಕೊಂಡು ಹೋಗಿದ್ದ, ಮಹಿಳೆಯರ ಮಾಂಗಲ್ಯವೂ ಸೇರಿದಂತೆ ರೈತರ ಯಾವತ್ತೂ ವಸ್ತುಗಳನ್ನು ಹಿಂತಿರುಗಿಸಬೇಕಿತ್ತು. ಅದಕ್ಕೆ ವಿರುದ್ಧವಾಗಿ 'ಸಾಲ ಬಾಕಿ ಇರುವ ರೈತರನ್ನು ಜಪ್ತಿಗೆ ಒಳಪಡಿಸುವುದಾಗಿ' ಸರ್ಕಾರ ಹೇಳುತ್ತಿದೆ. ಇದನ್ನು ರೈತ ಸಂಘ ತೀವ್ರವಾಗಿ ವಿರೋಧಿಸುತ್ತದೆ. ಇದರ ವಿರುದ್ಧ ಹೋರಾಡಲು ಜಪ್ತಿ ವಿರೋಧಿ ರೈತ ದಳ ರಚಿಸಲಾಗಿದೆ" ಎಂದು ಶಾಮಣ್ಣ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಉಸ್ತುವಾರಿ ಸಮಿತಿ

ಇದಲ್ಲದೆ, ಭ್ರಷ್ಟ ಸರ್ಕಾರಿ ನೌಕರರ ನಡವಳಿಕೆ ಹಾಗೂ ಕಾರ್ಯವಿಧಾನಗಳಲ್ಲಿ ಲೋಪ ಆದ, ಹಾಗೂ ಭ್ರಷ್ಟ ರಾಜಕಾರಣಿಗಳ ಆಸ್ತಿ ಪಾಸ್ತಿ ತಪಾಸಣೆ ನಡೆಸಿ ಅಕ್ರಮ ಆಸ್ತಿಗಳಿಕೆ ಕಂಡುಬಂದಲ್ಲಿ ಸಾರ್ವಜನಿಕರ ಎದುರು ಬಯಲು ಮಾಡಲು ರೈತ ಸಂಘದ ಉಸ್ತುವಾರಿ ಸಮಿತಿ ರಚಿಸಲಾಗಿದೆಯೆಂದೂ ಅವರು ಹೇಳಿದ್ದಾರೆ.

ಗ್ರಾಮ ಸ್ವರಾಜ್ಯ ಕಾರ್ಯಕ್ರಮ

ಕೆಲವೇ ಶ್ರೀಮಂತರು ಹಳ್ಳಿಗಳಿಂದ ಪ್ರಕೃತಿ ಸಂಪತ್ತನ್ನು ಹೊರಗೆ ಸಾಗಿಸಿ ಕೋಟ್ಯಾಧೀಶರಾಗಲು ಸರ್ಕಾರ ಸಹಾಯ ಮಾಡುತ್ತಿದೆ. ಉದಾಹರಣೆಗೆ, ನೀಲಗಿರಿಯ ನ್ಯಾಯವಾದ ಉತ್ಪಾದನೆ ಖರ್ಚು ಟನ್ನಿಗೆ ೪೮೦ ರೂ. ಇರುವಾಗ ಹರಿಹರದ ಪಾಲಿಫೈಬರ್ ನವರಿಗೆ ಕೇವಲ ೨೪ ರೂ. ಗಳಿಗೆ ಕೊಡುವುದು (ಇದರ ಜೊತೆಗೆ ಹಳ್ಳಿಗಳ ಪರಿಸರವನ್ನು ಹಾಳುಗೆಡಹುವುದು), ತೀರ್ಥಹಳ್ಳಿಯ ಅತ್ಯುತ್ತಮ ಕಲ್ಲನ್ನು ಖಾಸಗಿ ಕಂಪನಿಯವರಿಗೆ ಅಡ್ಡಾ ದಿಡ್ಡಿ ಹರಾಜು ಹಾಕಿ ಅದನ್ನು ವಿದೇಶಗಳಿಗೆ ದುಬಾರಿ ಬೆಲೆಗೆ ಸಾಗಿಸುತ್ತಿರುವುದು, ಬಣಸೌದೆ ಸಂಗ್ರಹಿಸಲು ಪಡೆದ ಪರವಾನಗಿಯಲ್ಲಿ ಹೇರಳ ನಾಟಾ ಸಾಗಿಸುತ್ತಿರುವುದು, ಸೀಗೆ, ಅಂಟುವಾಳ ಮುಂತಾದ ಅಮೂಲ್ಯ ಕಾಡುತ್ಪನ್ನಗಳನ್ನು ಖಾಸಗಿಯವರಿಗೆ ಅಡ್ಡಾದಿಡ್ಡಿ ಹರಾಜು ಹಾಕಿ ಅವರನ್ನು ಶ್ರೀಮಂತರನ್ನಾಗಿ ಮಾಡುವುದು, ಇತ್ಯಾದಿ. ಹಳ್ಳಿಯಿಂದ ಕಚ್ಚಾ ವಸ್ತುಗಳನ್ನು ನಗರಗಳಿಗೆ ಸಾಗಿಸಿ ಅಲ್ಲಿ ಕಾರ್ಖಾನೆ ನಡೆಸಿ ಅಲ್ಲಿನವರಿಗೆ ಉದ್ಯೋಗ ಕೊಟ್ಟು ಗ್ರಾಮಾಂತರ ಜನ ನಿರುದ್ಯೋಗಿಗಳಾಗುತ್ತಿದ್ದಾರೆ.

ಈ ಎಲ್ಲವನ್ನು ಹಾಗೂ ಆಹಾರ ಧಾನ್ಯಗಳನ್ನು ತಡೆದು, ತಾ|| ಗೆ ನ್ಯಾಯವಾದ ರಾಯಲ್ಟಿ ವಸೂಲುಮಾಡಿ, ಆ ಬಂಡವಾಳದಿಂದ 'ಗ್ರಾಮ ಸ್ವರಾಜ್ಯಸಮಿತಿ' ಮೂಲಕ ತಾ|| ನ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿ ಕಾರ್ಯ ನಡೆಸುವುದು, ರೈತ ಮಕ್ಕಳಿಗೆ ಕೆಲಸ ಸಿಗುವಂತೆ ಮಾಡುವುದು –ಇಂಥ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಲಾಗಿದೆ.

ರೈತರ ಬೇಸಾಯದ ಕೆಲಸಗಳೆಲ್ಲ ಮುಗಿಯುವತನಕ ಗೌರಿ ಹಬ್ಬದ ವರೆಗೆ ಪೂರ್ವಸಿದ್ಧತೆ ನಡೆಸಿಕೊಂಡು, ನಂತರ ತಾಲೂಕಿನಾದ್ಯಂತ ಈಕಾರ್ಯಕ್ರಮದ ನಿಮಿತ್ತ ಗ್ರಾಮಗಳಲ್ಲಿ 'ಜನತಾ ಗೇಟು'ಗಳನ್ನು ನೇಮಿಸಲು ಯೋಜಿಸಲಾಗಿದೆ ಎಂದೂ ಶಾಮಣ್ಣ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ಕೆಲಸ ಈಗ ಮಾಡದಿದ್ದಲ್ಲಿ ಇನ್ನು ೫–೧೦ ವರ್ಷಗಳಲ್ಲಿ ತಾ|| ನ ಸಂಪೂರ್ಣ ಸಂಪತ್ತು ಲಾರಿಗಳ ಮೇಲೆಯೇ ಹೊರಕ್ಕೆ ಸಾಗಿಸಲ್ಪಟ್ಟು ರೈತರು ಪಶ್ಚಾತ್ತಾಪ ಪಡಬೇಕಾಗುತ್ತದೆಂದೂ ಅವರು ಎಚ್ಚರಿಕೆಯ ಧ್ವನಿ ಎತ್ತಿದ್ದಾರೆ.

ಈ ವರ್ಷವೂ ಮಳೆಯ ಕಣ್ಣು ಮುಚ್ಚಾಲೆ?

ಈಚೆಗೆ ಹಲವು ವರ್ಷಗಳಿಂದಲೂ ಏರುಪೇರಾಗುತ್ತಿರುವ ಮಳೆ ಈವರ್ಷವೂ ಕಣ್ಣು ಮುಚ್ಚಾಲೆಯಾಡುವಂತೆ ಕಾಣುತ್ತಿದೆ. ಸ್ವಲ್ಪ ತಡವಾಗಿ ಆರಂಭವಾದರೂ ಹದವಾಗಿ ಹುಯ್ದು, ತೋಟಕ್ಕೆ ಔಷಧಿ ಹಾಕಲು ಅವಕಾಶವನ್ನೂ ಕೊಟ್ಟು ಪುನಃ ಶುರುವಾಗಿದೆಯೋ ಸರಿ. ಆದರೆ ರಭಸವಿಲ್ಲ. ಎಲ್ಲಾ ಕಡೆ ಗದ್ದೆ ನಾಟಿಗೆ ಸಾಕಾಗುವಷ್ಟು ನೀರು ಆಗಿಲ್ಲ. ಇನ್ನೂ ಹೀಗೇ ಮಳೆ ಹೋದರೆ ಗದ್ದೆ ಸಸಿಗಳಿಗೆ ತೀವ್ರ ಹೊಡೆತ ಬೀಳಲಿದೆ. ಕಳೆದ ವರ್ಷ ಕೊಪ್ಪದಲ್ಲಿ ಈ ಹೊತ್ತಿಗೆ ೩೬ ಅಂಗುಲ ಬಿದ್ದಿದ್ದ ಮಳೆ ಈ ವರ್ಷ ೨೪ ಅಂಗುಲ ಮಾತ್ರ ಬಿದ್ದಿದೆ. ಪುನಃ ಈ ವರ್ಷವೂ — ಪ್ರಳಯವೋ ಬೆಂಕಿಯೋ ಏನು ಅನಾಹುತ ಕಾದಿದೆಯೋ ಎಂದು ಯೋಚಿಸುವಂತಾಗಿದೆ.

ಬೆಳಗೊಳದಲ್ಲಿ ದಲಿತರಿಗೆ ಕೂಲಿ ಬಹಿಷ್ಕಾರ?

ಸಾರ್ವೆ: ಇಲ್ಲಿಗೆ ಸಮೀಪದ ಬೆಳಗೊಳ ಗ್ರಾಮದಲ್ಲಿ ಮೇಲ್ವರ್ಗದ ಜನರು ದಲಿತರಿಗೆ ಕೂಲಿಬಹಿಷ್ಕಾರ ವಿಧಿಸಿದ್ದಾರೆಂದು ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ತಿಳಿಸಿದ್ದಾರೆ.

ಗ್ರಾಮದ ಮಾರಿ ದೇವಸ್ಥಾನದಲ್ಲಿ (ದುರ್ಗಾದೇವಸ್ಥಾನ) ಕಳೆದ ಜೂನ್‌ನಲ್ಲಿ ನಡೆದ ಮಾರಿ ಹರಕೆಯ ಸಂದರ್ಭದಲ್ಲಿ, ಹಿಂದಿನಂತೆ ದಲಿತರು 'ಬಿಟ್ಟಿ' ಕೆಲಸ ಮಾಡಲು ಈ ಬಾರಿ ನಿರಾಕರಿಸಿದ್ದೇ ಈ ಬಹಿಷ್ಕಾರಕ್ಕೆ ಕಾರಣವೆಂದು ತಿಳಿಸಲಾಗಿದೆ.

ಇದಕ್ಕೂ ದಲಿತರು 'ಬಗ್ಗದಿದ್ದರೆ', 'ಮುಂದೆ ಗಲಾಟೆ ಮಾಡಿ 'ಬಗ್ಗಿಸಲೂ' ಆ ಜನ ಸಿದ್ಧತೆ ನಡೆಸುತ್ತಿದ್ದಾರೆಂದು ತಿಳಿಸಿರುವ ದಲಿತರು ಈ ಬಗ್ಗೆ ತೀವ್ರ ಆತಂಕದಿಂದ ತಾ|| ನ ಅಧಿಕಾರಿಗಳಿಗೂ ಶಾಸಕರಿಗೂ ಪತ್ರ ಬರೆದಿರುವುದಾಗಿ ಹೇಳಿದ್ದಾರೆ. ಈ ಬಹಿಷ್ಕಾರದಲ್ಲಿ ಹಲವರು ರೈತ ಸಂಘದ ಕಾರ್ಯಕರ್ತರೂ ಸೇರಿದ್ದಾರೆಂದು ಅವರು ತಿಳಿಸಿದ್ದಾರೆ.

ಹರಿಹರಪುರದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ

ಜಿಲ್ಲೆಗೆ ಪ್ರಥಮ

ಚಿಕ್ಕಮಗಳೂರು: ಕಳೆದ ಮಾರ್ಚ್‌ನಲ್ಲಿ ನಡೆದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ೫೧೪ ಅಂಕ ಗಳಿಸಿದ ಹರಿಹರಪುರದ ಶಾರದಾ ಕಾಲೇಜಿನ ಎಸ್. ವಿ. ನಾಗರಾಜ್ ಜಿಲ್ಲೆಯಲ್ಲೇ ಅತಿಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ.

ಜುಲೈ ೧೭ ರಂದು ಇಲ್ಲಿ ನಡೆಯಲಿರುವ ಜಿಲ್ಲಾ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಮತ್ತು ಕಿ| ಕಾಲೇಜು ಪ್ರಿನ್ಸಿಪಾಲರುಗಳ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಈತನೂ ಸೇರಿದಂತೆ ಐವರು ಪ್ರತಿಭಾವಂತರನ್ನು ಪುರಸ್ಕರಿಸಲಾಗುವುದು. ಆಲ್ದೂರು ಶೃಂಗೇರಿಯ [illegible] ಪ್ರೌಢಶಾಲೆಯ [illegible] (೫೧೩) ಹಾಗೂ ಸರ್ಕಾರಿ ಪ್ರೌಢಶಾಲೆಯ ಕೆ. ಎ. ಗಣೇಶ (೪೯೫) ಅವರೂ ಇದ್ದಾರೆ. ಜಿಲ್ಲೆಯಲ್ಲಿ ಈ ಬಾರಿ ೮೦ ಪ್ರೌಢಶಾಲೆಗಳಿಂದ ಒಟ್ಟು ೭,೦೦೦ ವಿದ್ಯಾರ್ಥಿಗಳು ಪರೀಕ್ಷೆ ಕಟ್ಟಿದ್ದು ಶೇ. ೪೬ ತೇರ್ಗಡೆಯಾಗಿದ್ದಾರೆ.

ವಾಣಿಜ್ಯ ಪರೀಕ್ಷೆ: ನ.ರಾ.ಪುರ ಶಾಲೆಗೆ ಶೇ. ೭೮ ಫಲಿತಾಂಶ

ನ.ರಾ.ಪುರ: ಇಲ್ಲಿನ ಶ್ರೀ ಜ್ಯೋತಿ ವಾಣಿಜ್ಯ ವಿದ್ಯಾ ಶಾಲೆಯಿಂದ ಕಳೆದ ಮೇ ತಿಂಗಳಿನಲ್ಲಿ ನಡೆದ ಕನ್ನಡ/ಇಂಗ್ಲಿಷ್ ಬೆರಳಚ್ಚು ಜೂನಿಯರ್ ಮತ್ತು ಸೀನಿಯರ್ ಪರೀಕ್ಷೆಗೆ ಒಟ್ಟು ೩೯ ವಿದ್ಯಾರ್ಥಿಗಳು ಕುಳಿತಿದ್ದು, ಅವರಲ್ಲಿ ಪ್ರಥಮ ಶ್ರೇಣಿಯಲ್ಲಿ ೧೭, ದ್ವಿತೀಯಶ್ರೇಣಿಯಲ್ಲಿ ೧೨, ತೃತೀಯ ಶ್ರೇಣಿಯಲ್ಲಿ ೭– ಹೀಗೆ ಒಟ್ಟು ೩೬ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಶೇಕಡ ೭೮ ರಷ್ಟು ಫಲಿತಾಂಶ ಬಂದಿರುತ್ತದೆ.

ಇಲಾಖಾ ನೇಮಕಾತಿ ಸಮಿತಿಗಳಿಗೆ ಆಯ್ಕೆ

ಕೊಪ್ಪ: ರಾಜ್ಯ ಸರ್ಕಾರ ವಿವಿಧ ಇಲಾಖೆಗಳ ನೇಮಕಾತಿ ಸಮಿತಿಗಳನ್ನು ರಚಿಸಿದ್ದು, ಚಿಕ್ಕಮಗಳೂರಿನ ವಿ. ಪಿ. [illegible] ಬಂದರು ಇಲಾಖಾ [illegible] ಸಿಂಹರಾಜಪುರದ ಕೊಳಲೆ [illegible] ಗೂ ಹಿ. ಸಿ. ದಿವಾಕರ್ [illegible] ಕ್ರಮವಾಗಿ ಅಭಿವೃದ್ಧಿ ಮತ್ತು [illegible] ಸಮಿತಿ ಹಾಗೂ ಶಿಕ್ಷಣ ಇಲಾಖಾ ಸಮಿತಿಗೂ ನಾಮಕರಣ ಮಾಡಿರುವುದಾಗಿ [illegible] ಮ ಬಂದಿದೆ.

ಗೌರಗಣೇಶೋತ್ಸವ ಸಮಿತಿ

ಕೊಪ್ಪ: ಪ್ರತಿ ವರ್ಷದಂತೆ ಈ ವರ್ಷ [illegible]
[illegible]
[illegible]
[illegible]
[illegible]
[illegible]
[illegible] ೧೦ [illegible]
[illegible]
[illegible]

ಓದುಗರ ಪತ್ರ

ಅಂಚೆ ಡಬ್ಬಿ ಬೇಕು

ನರಸಿಂಹರಾಜಪುರದ ಕೇಂದ್ರ ಸ್ಥಳವಾದ ಪುರಸಭೆ ಹತ್ತಿರ ಅಂಚೆ ಡಬ್ಬಿ ಅವಶ್ಯಕವಾಗಿದೆ. ಆ ಪ್ರದೇಶದ ಶಾಲಾ– ಕಾಲೇಜುಗಳು, ಪಶುವೈದ್ಯಶಾಲೆ, ಸರಕಾರಿ ಆಸ್ಪತ್ರೆ, ಶಾಲಾ ತನಿಖಾಧಿಕಾರಿಗಳ ಕಛೇರಿ ಇತ್ಯಾದಿ ಸುತ್ತ ಮುತ್ತಲಿನ ಜನರು ದೂರದ ಪೇಟೆಗೆ, ಇಲ್ಲವೆ ಅಗ್ರಹಾರದ ಕಛೇರಿಗೆ ಬರಬೇಕಾಗಿದೆ. ಪೇಟೆ ಅಂಚೆ ಕಛೇರಿ ಸಮೀಪವೇ ಮುಂಡಗದ್ದೆ ವರ್ತುಲದಲ್ಲಿ ಇನ್ನೊಂದು ಅಂಚೆ ಡಬ್ಬಿ ಇಡಲಾಗಿದೆ. ಅಗ್ರಹಾರ ಅಂಚೆ ಕಛೇರಿ ವ್ಯಾಪ್ತಿಗೆ ಒಳಪಡುವ ಈ ಪ್ರದೇಶದಲ್ಲೊಂದು ಅಂಚೆ ಡಬ್ಬಿ ಇಡಲು ಕೊಪ್ಪ ವಿಭಾಗದ ತನಿಖಾಧಿಕಾರಿಗಳು ಗಮನ ಹರಿಸಬೇಕೆಂದು ಈ ಪ್ರದೇಶದ ಜನಗಳ ಪರವಾಗಿ ಕೋರಿಕೆ.

—ಒಬ್ಬ ಓದುಗ, ನ.ರಾ.ಪುರ.

ಅರ್ಜಿ ಕೊಟ್ಟ ಬಗ್ಗೆ ಪಾವ್ತಿ ಪತ್ರಕ್ಕೆ ಸತಾಯಿಸಿದ ದೂರು: ತಹಸೀಲ್ದಾರರ ವಿವರಣೆ

ಕೊಪ್ಪ: "೮-೬-೮೩ರಂದು ಕೊಪ್ಪದ ತಹಸೀಲ್ದಾರ್ ಕಚೇರಿಗೆ ಅರ್ಜಿಯೊಂದನ್ನು ತಲುಪಿಸಿ ಪಾವ್ತಿ ಪತ್ರ (ಅಕ್ನಾಲೆಜ್‌ಮೆಂಟ್) ಕೇಳಿದಾಗ ಆಚೆಗೂ ಈಚೆಗೂ ೨-೩ ಸಲ ಓಡಾಡಿಸಿ, ಕೊನೆಗೆ 'ನಾಳೆ ಬಂದು ಪಾವ್ತಿ ಪತ್ರ ತೆಗೆದುಕೊಂಡು ಹೋಗಿ' ಎಂದು ಶಿರಸ್ತೆದಾರರು ಹೇಳಿದರು. ಅದು ಸಾಧ್ಯವಿಲ್ಲವೆಂದು ಪಟ್ಟುಹಿಡಿದಾಗ ಕೊನೆಗೆ ಅದನ್ನು ಕೊಟ್ಟರು ಅರ್ಜಿ ಕೊಟ್ಟದ್ದಕ್ಕೆ ತಾವಾಗೇ ಪಾವ್ತಿ ಪತ್ರ ಕೊಡದೆ 'ನಾಳೆ ಬಾ' ಎಂದು ದೂರದ ಹಳ್ಳಿಗರಿಗೆ ಹೇಳುವುದು ಸರಿಯೆ?" ಎಂದು ಬಸರಿಕಟ್ಟೆ ಸಮೀಪದ ಹಳ್ಳಿಯುವರಾದ ಎಸ್. ಶ್ರೀಧರಮೂರ್ತಿ ಎಂಬವರು ಬರೆದಿದ್ದರು.

ಈ ಬಗ್ಗೆ ಪ್ರತಿಕ್ರಿಯೆ ಕೇಳಿ ಬರೆದ ಪತ್ರಕ್ಕೆ ಕೊಪ್ಪ ತಹಸೀಲ್ದಾರರು ಈ ರೀತಿ ಉತ್ತರಿಸಿದ್ದಾರೆ:

"ಶ್ರೀ ಎಸ್. ಶ್ರೀಧರಮೂರ್ತಿ ಎಂಬುವರು ಈ ಕಛೇರಿಗೆ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ಆದರೆ ದಿನಾಂಕ ೮–೬–೮೩ ರಂದು ಶ್ರೀ ಜಿ.ಆರ್. ವೆಂಕಟಸುಬ್ಬರಾವ್ ಎಂಬುವರ ಅರ್ಜಿಯು ತಲ್ಪಿದ ಬಗ್ಗೆ ಪಾವ್ತಿ ಪತ್ರ ಕೇಳಿದಾಗ ನಮ್ಮ ಕಛೇರಿಯ ನೋಂದಣಿ ಗುಮಾಸ್ತರು ಅದೇ ದಿವಸ ಪಾವ್ತಿ ಪತ್ರ ಕೊಟ್ಟಿರುತ್ತಾರೆ. ದಿನಾಂಕ: ೯–೬–೮೩ ರಂದು ಅರ್ಜಿದಾರರಾದ ಶ್ರೀ ಜಿ. ಆರ್. ವೆಂಕಟಸುಬ್ಬರಾವ್ ರವರು ಪುನಃ ಕಛೇರಿಗೆ ಹಾಜರಾಗಿ ಪಾವ್ತಿ ಪತ್ರ ಬೇಕೆಂದು ಕೇಳಿದಾಗ ಅವರಿಗೂ ಸಹ ಅದೇ ದಿವಸ ಪಾವ್ತಿ ಮಾಡಿರುತ್ತದೆ."

ಕಳವು

ನ. ರಾ. ಪುರ: ಇಲ್ಲಿನ ದೀಪ್ತಿ ಪ್ರೌಢಶಾಲೆಯ ಹೊಸ ಕಟ್ಟಡಕ್ಕಾಗಿ ತರಿಸಿ ಇಟ್ಟಿದ್ದ ಸುಮಾರು ೧ ಸಾವಿರ ರೂ. ಬೆಲೆಯ ಎಲ್ಲಾರು ತಗಡುಗಳು ಜುಲೈ ೫ ರಂದು ಕಳುವಾಗಿದ್ದು, ಈ ಬಗ್ಗೆ ಪೋಲೀಸರಿಗೆ ದೂರು ನೀಡಲಾಗಿದೆಯೆಂದು ತಿಳಿದು ಬಂದಿದೆ.

ಹರಿಜನ ರಾಮಯ್ಯ ಗೌಡನಾದನೆ?

ಚಿಕ್ಕಮಗಳೂರು: ರಾಮಯ್ಯ ಎಂಬ ಹರಿಜನರ ಹೆಸರನ ದಾಖಲೆಯನ್ನು ಇಂಕ್ ರಿಮೂವರಿನಿಂದ ಅಳಿಸಿ ತಿದ್ದಿ ರಾಮೇಗೌಡನೆಂದು ಮಾಡಿ ನೂರಾರು ಎಕರೆ ಭೂಮಿ ಲಪಟಾಯಿಸುವ ಯತ್ನ ನಡೆಸಿರುವುದನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ "ಆತ್ಮ ವಂಚನೆಯ ಕೃತ್ಯ"ವೆಂದು ತೀವ್ರವಾಗಿ ಖಂಡಿಸಿದೆ. ಜುಲೈ ೬ರ 'ಜನಮಿತ್ರ' ಈ ಪ್ರಕರಣವನ್ನು ಬಯಲು ಮಾಡಿದೆ.

ಅಧಿಕಾರಿಗಳ ಶಾಮೀಲಿನೊಂದಿಗೆ ಶ್ರೀಮಂತರು ಕಾನೂನನ್ನು ಧೂಳೀಪಟ ಮಾಡಿ, ನೂರಾರು ಎಕರೆ ಜಮೀನು ಒತ್ತುವರಿ ಮತ್ತು ಬಡವರ ಆಸ್ತಿಯನ್ನು ಲಪಟಾಯಿಸುತ್ತಿರುವಾಗ, ಹಸಿವು, ಅಸ್ಪೃಶ್ಯತೆಗಳಿಂದ ಬಳಲುತ್ತಿರುವ ಜನರಿಗೆ ತಿಳುವಳಿಕೆ ನೀಡಬೇಕಾದ ವಿದ್ಯಾವಂತರಿಂದಲೇ ಇಂಥ ಶೋಷಣೆ, ಸುಲಿಗೆ, ನಡೆಯುತ್ತಿರುವುದು ತೀರ ಅಮಾನವೀಯವೆಂದು ದ.ಸಂ.ಸ. ಹೇಳಿದೆ.

ಈ ಪ್ರಕರಣ ಆಡಳಿತದ ಬೇಜವಾಬ್ದಾರಿಗೆ ಸಾಕ್ಷಿಯಾಗಿದೆ ಎಂದಿರುವ ಅದು ಈ ಪ್ರಕರಣದಲ್ಲಿ ಭಾಗಿಯಾಗಿರುವವರಿಗೆ ಉಗ್ರ ಶಿಕ್ಷೆ ವಿಧಿಸದಿದ್ದಲ್ಲಿ ನ್ಯಾಯಕ್ಕಾಗಿ ಚಳುವಳಿ ಹೂಡಬೇಕಾದೀತೆಂದು ಅಧಿಕಾರಿಗಳನ್ನೂ ಶಾಸಕರನ್ನೂ ಎಚ್ಚರಿಸಿದೆ.

ಸಾಲ ವಸೂಲಿ: ಶೃಂಗೇರಿ ಭೂ ಬ್ಯಾಂಕ್‌ಗೆ ಜಿಲ್ಲೆಯಲ್ಲಿ ೨ನೇ ಸ್ಥಾನ

ಶೃಂಗೇರಿ: ವಸೂಲಾಗಬೇಕಾಗಿದ್ದ ೧೩ ಲಕ್ಷ ರೂ. ಸಾಲದ ಪೈಕಿ ೧೦.೫ ಲಕ್ಷ ರೂ.ಗಳನ್ನು ಸಂಗ್ರಹಿಸಿರುವ ಇಲ್ಲಿನ ಭೂ ಅಭಿವೃದ್ಧಿ ಬ್ಯಾಂಕ್ ಸಾಲ ವಸೂಲಿಯಲ್ಲಿ ಜಿಲ್ಲೆಯಲ್ಲಿ ಎರಡನೇ ಸ್ಥಾನ ಪಡೆದಿದೆ.

ಶೃಂಗೇರಿ ತಹಸೀಲ್ದಾರರಾಗಿ ಭಾಸ್ಕರ ಆಚಾರ್ಯ

ಶೃಂಗೇರಿ: ಉ. ಕನ್ನಡ ಜಿಲ್ಲೆಯ ಯಲ್ಲಾಪುರಕ್ಕೆ ವರ್ಗವಾಗಿರುವ ಅನಂತರಾವ್ ಅವರ ಸ್ಥಾನದಲ್ಲಿ ತಹಸೀಲ್ದಾರರಾಗಿ ಭಾಸ್ಕರ ಆಚಾರ್ಯ ಎಂಬುವರು ಜುಲೈ ೧ ರಂದು ಅಧಿಕಾರ ವಹಿಸಿಕೊಂಡಿದ್ದಾರೆ.

ಏಲಕ್ಕಿ ಕಳ್ಳತನ

(ವರದಿ: ಕಲಬಿ ಶ್ರೀನಿವಾಸ್)

ಆಗಳಗಂಡಿ: ಇಲ್ಲಿಗೆ ಸಮೀಪದ ಹುಲಿಗರಡಿಯ ಹೆಚ್.ಎಲ್.ಗಣೇಶರಾವ್ ಎಂಬವರ ತೋಟಕ್ಕೆ ಯಾರೋ ದುಷ್ಕರ್ಮಿಗಳು ಜುಲೈ ೮ರ ರಾತ್ರಿ ನುಗ್ಗಿ ಸುಮಾರು ೨೫ ಕಿಲೊಗ್ರಾಂಗೂ ಹೆಚ್ಚು ಏಲಕ್ಕಿಯನ್ನು ತೆರಿದುಕೊಂಡು ಹೋಗಿದ್ದಾರೆಂದು ತಿಳಿದು ಬಂದಿದೆ. ಈ ಬಗ್ಗೆ ಈಗಾಗಲೇ ಪೋಲೀಸರಿಗೆ ದೂರು ಸಲ್ಲಿಸಿದ್ದು, ಮುಂದಿನ ತನಿಖೆ ನಡೆಯುತ್ತಿದೆ. ಕಳ್ಳರು ಈ ವರೆಗೂ ಸಿಕ್ಕಿಲ್ಲ. ಬಿಗಿಯಾದ ಬಂದೋಬಸ್ತು ಮಾಡದಿದ್ದಲ್ಲಿ ಈ ಪ್ರದೇಶದಲ್ಲಿ ಏಲಕ್ಕಿ ಬೆಳೆಯನ್ನು ಉಳಿಸಿಕೊಳ್ಳುವುದು ತುಂಬಾ ಕಷ್ಟವೆಂದು ಹೇಳಲಾಗಿದೆ.

ಬೆಂಕಿ ಅನಾಹುತದಿಂದ ಕೊಟ್ಟಿಗೆ ನಾಶ

ಸಮೀಪದ ಸೋಮನಗದ್ದೆಯ ಜುಲೈ ೪ ರಂದು ಬೆಳಿಗ್ಗೆ ಸಂಭವಿಸಿದ ಬೆಂಕಿ ಅನಾಹುತದಲ್ಲಿ ಅಪ್ಪುಪೂಜಾರಿ ಎಂಬಾತನ ಕೊಟ್ಟಿಗೆ ಸಂಪೂರ್ಣ ನಾಶವಾಗಿದೆಯೆಂದು ತಿಳಿದು ಬಂದಿದೆ. ಈ ಅನಾಹುತಕ್ಕೆ ಕಾರಣವೇನೆಂದು ಇನ್ನೂ ಗೊತ್ತಾಗಿಲ್ಲ

ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಬಹುಮಾನ

ಶಿವಮೊಗ್ಗ: ಇಲ್ಲಿನ ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘವು ಪ್ರತಿ ವರ್ಷದಂತೆ ಹಾಗೂ ತನ್ನ ಬೆಳ್ಳಿಹಬ್ಬದ ಸ್ಮರಣಾರ್ಥ ಈ ವರುಷವೂ ಸಹ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳ ತನ್ನ ಸದಸ್ಯರ ಮಕ್ಕಳ ಪೈಕಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದು ಪಾಸಾದವರಿಗೆ ಪ್ರೋತ್ಸಾಹ ಬಹುಮಾನಗಳನ್ನು ಕೊಡಲು ತೀರ್ಮಾನಿಸಿದೆ.

ಹೀಗೆ ಅರ್ಹತೆಯುಳ್ಳ ವಿದ್ಯಾರ್ಥಿಗಳು ಈ ವರ್ಷ ಪಾಸಾದ ಪರೀಕ್ಷೆಯ ಸರ್ಟಿಫೈಡ್ ಮಾರ್ಕ್ಸ್‌ಕಾರ್ಡ್, ತಮ್ಮ ಹೆಸರು, ತಂದೆಯ ಹೆಸರು, ಸಂಘದಲ್ಲಿ ಅವರ ಸದಸ್ಯತ್ವ ಸಂಖ್ಯೆ– ಈ ಮಾಹಿತಿಗಳನ್ನು ಕೊಟ್ಟು ಸಂಘದ ಕಾರ್ಯದರ್ಶಿಯವರಿಗೆ ೩೦–೭–೮೩ರೊಳಗೆ ಸಲ್ಲಿಸಬೇಕೆಂದು ಕಾರ್ಯದರ್ಶಿಗಳು ಸೂಚಿಸಿದ್ದಾರೆ.

ಪ್ರಾಥಮಿಕ ಶಾಲಾ ಸ್ಥಳೀಯ ಅಭ್ಯರ್ಥಿಗಳ ಗಮನಕ್ಕೆ

ದಿನಾಂಕ ೧೮-೭-೮೩ನೇ ಸೋಮವಾರ ಚಿಕ್ಕಮಗಳೂರು ಶಂಕರ ಪುರದಲ್ಲಿರುವ ಡಾ॥ ಅಂಬೇಡ್ಕರ್ ಸಂಘದಲ್ಲಿ ಸ್ಥಳೀಯ ಅಭ್ಯರ್ಥಿಗಳ ಸಭೆ ಕರೆಯಲಾಗಿದ್ದು, ಅಂದು ೧೧ ಗಂಟೆಗೆ ಈಗಾಗಲೇ ರಚಿತವಾಗಿರುವ ಡಿ. ಎಲ್. ಆರ್. ಸಿ.ಯ ವಿರುದ್ಧ ಪ್ರತಿಭಟನಾ ಮೆರವಣಿಗೆಯನ್ನು ನಡೆಸಲು ಏರ್ಪಡಿಸಿರುವುದರಿಂದ ಎಲ್ಲಾ ಸ್ಥಳೀಯ ಅಭ್ಯರ್ಥಿಗಳು ಭಾಗವಹಿಸ ಬೇಕಾಗಿ ಸ್ಥಳೀಯ ಅಭ್ಯರ್ಥಿ ಶಿಕ್ಷಕರ ಸಂಘದ ಕಾರ್ಯದರ್ಶಿಗಳು ಕೋರಿದ್ದಾರೆ.

ಸ್ಟೈಪೆಂಡರಿ ಪದವೀಧರನ ಸಾವು: ಸ್ಟೈ. ಪ. ಸಂಘದ ಕಳವಳ

ಈಚೆಗೆ ಕಡೂರು ತಾ॥ ನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಸ್ಟೈಪೆಂಡರಿಯೊಬ್ಬರು ಸಂಸಾರದ ಹೊರೆಯನ್ನು ನಿರ್ವಹಿಸಲಾರದೆ ಐದುಮಕ್ಕಳನ್ನು ಅಗಲಿ ಸಾವನ್ನಪ್ಪಿದ ಬಗ್ಗೆ ಶೃಂಗೇರಿ ತಾ॥ ಸ್ಟೈ. ಪ. ಸಂಘ ತೀವ್ರ ಸಂತಾಪ ವ್ಯಕ್ತ ಪಡಿಸಿ, ನಿರ್ಗತಿಕ ಕುಟುಂಬಕ್ಕೆ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಹಣಕಾಸಿನ ನೆರವು ನೀಡಬೇಕೆಂದು ಕೋರಿದೆ. ಕಳವಳಕರವಾದ ಇಂತಹ ಪ್ರಕರಣಗಳು ಪದೇ ಪದೇ ನಡೆಯುತ್ತಿರುವುದನ್ನು ತಪ್ಪಿಸಲು ಸ್ಟೈ. ಪದವೀಧರರನ್ನು ಖಾಯಂಗೊಳಿಸುವ ಸಮಸ್ಯೆಯನು ಶೀಘ್ರವೇ ಬಗೆಹರಿಸಬೇಕೆಂದು ಸಂಘ ಸರ್ಕಾರವನ್ನು ಒತ್ತಾಯಿಸಿದೆ.

ಹಂದಿಯಿಂದ ಲೂಟಿ

(ನಮ್ಮ ಪ್ರತಿನಿಧಿಯಿಂದ)

ಭೈರೇದೇವರು: ಇಲ್ಲಿಗೆ ಸಮೀಪದ ಬಾಗೊಳ್ಳಿ ಎಂಬಲ್ಲಿ ಶೇಷಮ್ಮ ಹೆಗ್ಗಡ್ತಿ ಎಂಬಾಕೆ ಕೆಲವು ಹಂದಿಗಳನ್ನು ಸಾಕಿದ್ದು, ಅವು ನೆರೆಹೊರೆಯ ಎಲ್ಲಾ ವ್ಯವಸಾಯಗಾರರಿಗೂ ತೀವ್ರ ತೊಂದರೆ ಕೊಡುತ್ತಿವೆಯೆಂದು ದೂರಲಾಗಿದೆ. ಗದ್ದೆಗೆ ಬಂದು ಬಿತ್ತಿದ ಬತ್ತ ತಿನ್ನುವುದು, ಅಂಚುಗಳನ್ನು ಒತ್ತುವುದು, ಅಡಿಕೆ ತೋಟಕ್ಕೆ ನುಗ್ಗಿ ಅಡಿಕೆ ಏಲಕ್ಕಿ ಸಸಿಗಳನ್ನು ಧ್ವಂಸ ಮಾಡುವುದು — ಮುಂತಾಗಿ ಈಗ್ಗೆ ಸುಮಾರು ೨-೩ ವರ್ಷಗಳಿಂದಲೂ ಈ ವರೆಗೆ ಅನುಭವಿಸಿಕೊಂಡು ಬಂದಿದ್ದಾರೆನ್ನಲಾಗಿದೆ. ಪ್ರತಿನಿತ್ಯ ಹಗಲು ರಾತ್ರಿಯೆನ್ನದೆ ಹಂದಿಗಳ ಈ ಕಾಟವನ್ನು ತಡೆಯಲಸಾಧ್ಯವಾಗಿದೆಯೆಂದೂ, ಹಂದಿಯ ಮಾಲೀಕರು ಅವುಗಳ ಕಾಟ ತಪ್ಪಿಸದಿದ್ದಲ್ಲಿ ಸೂಕ್ತವಾದ ಕಾನೂನು ಕ್ರಮ ಕೈಗೊಳ್ಳ ಬೇಕಾಗುವುದೆಂದೂ ಆ ಪ್ರದೇಶದ ಜನ ತಿಳಿಸಿದ್ದಾರೆ.

ಬಡ ಗಿರಿಜನರಿಗೆ ಎಮ್ಮೆ ಸಾಲ ವಿತರಣೆ

ಮೇಲ್ಪಾಲು: ಇಲ್ಲಿನ ಕರ್ನಾಟಕ ಬ್ಯಾಂಕಿನಲ್ಲಿ ಈಚೆಗೆ ೬ ಗಿರಿಜನ ಬಡ ಕುಟುಂಬಗಳಿಗೆ ತಲಾ ಎರಡು ಎಮ್ಮೆ ಹಾಗೂ ಅವುಗಳ ಮೇವಿಗಾಗಿ ಸಾಲ ನೀಡಿದ್ದು, ಈವರೆಗೆ ಒಟ್ಟು ೧೫ ಜನರಿಗೆ ಸಾಲ ನೀಡಲಾಗಿದೆಯೆಂದು ಶಾಖಾ ಮ್ಯಾನೇಜರ್ ಎ. ರಾಘವಾಚಾರ್ ತಿಳಿಸಿದ್ದಾರೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿರಿಮನೆ ನಾಗರಾಜ್.
ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ